ಯಾರಿಗಾದರೂ 'ಯಮನ ಊರು ಹೇಗಿದೆ? ಯಮನ ದೇಶ ಹೇಗಿದೆ?' ಎಂದು ತಿಳಿದುಕೊಳ್ಳುವ ಆಸೆ ಉಂಟಾಗಿದೆಯೆ? ಹೀಗೆಂದು ಕೇಳುತ್ತದೆ ಸಂಸ್ಕೃತದ ಸುಭಾಷಿತವೊಂದು. ಯಮನ ಊರು–ದೇಶ ಎಂದರೆ ನಾವು ಸತ್ತ ಬಳಿಕ ತಲಪುತ್ತೇವೆ – ಎಂದು ಊಹಿಸಲಾದ ತಾಣ. ಜೀವನದಲ್ಲಿ ನಾವೆಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಸಾವನ್ನು ನೋಡಿರುತ್ತೇವೆ. ಆ ಕ್ಷಣವೇನೋ ನಮಗೆ ಅಭಾವವೈರಾಗ್ಯವೊಂದು ಮೂಡಿಕೊಳ್ಳುತ್ತದೆ. ಆದರೆ ಮರುಕ್ಷಣವೇ ಅದು ಮರೆಯಾಗಿ, ನಮ್ಮ ಸಹಜಗುಣಗಳು ಮೇಲ್ಮೈಗೆ ಬಂದು ಎಂದಿನಂತೆ ಕಾರುಬಾರು ಮಾಡಲು ತೊಡಗುತ್ತವೆ. ಸಾವಿನ ರಹಸ್ಯ ನಮ್ಮನ್ನು ಜೀವನದುದ್ದಕ್ಕೂ ಕಾಡುವಂತಾದರೆ ಆಗ ನಮ್ಮ ಜೀವನದ ದೃಷ್ಟಿಕೋನವೇ ಬದಲಾಗುವುದರಲ್ಲಿ ಸಂದೇಹವಿಲ್ಲ. ಆ ಮುದುಕನಿಗೆ ಬದುಕಿನ ಬೆಲೆ ಗೊತ್ತಾದದ್ದು ಸಾವನ್ನು ಕಂಡಾಗಲೇ. ಸಾವನ್ನು ಕರೆದು ತಾನು ಮಾಡಿದ ತಪ್ಪು ಅವನಿಗೆ ಅರಿವಾಯಿತು. ಆದುದರಿಂದಲೇ ಅವನು ಹೊರೆಯನ್ನು ತಲೆಯ ಮೇಲೆ ಇಡಲು ಸಾವನ್ನು ಅವನು ಕೇಳಿಕೊಂಡದ್ದು. ಬದುಕಿಗೆ ಸಹಕರಿಸುವಂತೆ ಅವನು ಸಾವನ್ನೇ ಕೇಳಿಕೊಂಡ! ಹೌದು, ಬದುಕಿನುದ್ದಕ್ಕೂ, ನಮ್ಮ ಹುಟ್ಟಿನಿಂದ ಆರಂಭಗೊಂಡು, ಜೊತೆಗಿರುವುದೇ ಸಾವು. ಹೀಗಾಗಿಯೇ ಆ ಮುದುಕ ಕರೆದ ಕೂಡಲೇ ಅದು ಪ್ರಕಟವಾಯಿತು. ನಮ್ಮ ಜೊತೆಯಲ್ಲಿಯೇ ಇರುವ ಸಾವಿನ ನೆನಪಾಗುವುದು ಇನ್ನು ಜೀವನ ದುರ್ಭರವಾಗಿದೆ ಎಂದಾದಾಗ ಮಾತ್ರವೇ. ಸಾವು ಪ್ರತ್ಯಕ್ಷವಾದರೆ ನಾವು ಮರೆಯಾದಂತೆಯೇ! ಆದರೆ ಬದುಕು ಸಾಕು ಎನಿಸುವ ಕ್ಷಣದಲ್ಲಿಯೇ 'ಬದುಕು ಬೇಕು' ಎನಿಸುವಂತೆ ಮಾಡುವಂಥ ಶಕ್ತಿ ಇರುವುದು ಸಾವಿಗೆ ಮಾತ್ರ. ಇನ್ನೇನು ಸಾವಿನ ಅಂತಿಮ ಕ್ಷಣದಲ್ಲಿದ್ದ ವ್ಯಕ್ತಿಯೊಬ್ಬನನ್ನು 'ನಿನ್ನ ಕೊನೆಯ ಆಸೆ ಏನು?' ಎಂದು ಕೇಳಿದರಂತೆ. 'ಬೇರೆ ಇನ್ನೊಬ್ಬ ಡಾಕ್ಟರ್ ಹತ್ತಿರ ಹೋಗೋಣ' ಎಂದನಂತೆ ಆ ವ್ಯಕ್ತಿ. ನಮಗೆ ಇದು ಒಂದು ಜೋಕ್ ಆಗಿ ಕೇಳಬಹುದು. ಆದರೆ ಮನಸ್ಸು ಯೋಚಿಸುವುದೂ ಬಯಸುವುದೂ ಇದನ್ನೇ. ಬದುಕಿನ ಮೌಲ್ಯ ನಮಗೆ ಗೊತ್ತಾಗುವುದೇ ಸಾವಿನ ಹೊಸ್ತಿಲಿನಲ್ಲಿ. ಈ ಮೌಲ್ಯವನ್ನು ಕಾಪಾಡಿಕೊಳ್ಳಬಲ್ಲ ವಿವೇಕವನ್ನು ನಾವು ರೂಢಿಸಿಕೊಳ್ಳಬೇಕಷ್ಟೆ.

ಬಹುಶಃ ಸಾವು ಸದಾ ನಮ್ಮ ಜೊತೆಯಲ್ಲಿಯೇ ಇರುವುದರಿಂದ ನಾವು ಜೀವಿಸಿರುವಾಗಲೇ ಸತ್ತವರಂತೆ ಬದುಕುತ್ತಿರುತ್ತೇವೆ. ಬದುಕು ಸುಂದರವಾದುದು; ಬೆಲೆಯುಳ್ಳದ್ದು; ಅರ್ಥಪೂರ್ಣವಾದದ್ದು. ಇವು ಪ್ರಕಟವಾಗುವುದು ನಮ್ಮ ಬದುಕಿನ ರೀತಿಯಿಂದಲೇ. ಒಂದೊಂದು ಕ್ಷಣವೂ ನಮ್ಮ ಆಯುಸ್ಸು ಕಡಿಮೆಯಾಗುತ್ತಲೇ ಹೋಗುತ್ತದೆ. ಅಕ್ಕಮಹಾದೇವಿಯ ವಚನವೊಂದು ಇದನ್ನು ತುಂಬ ಸೊಗಸಾಗಿ ನಿರೂಪಿಸುತ್ತದೆ:

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ,
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ! ಶಿವನ ನೆನೆಯಿರೆ! ಈ ಜನ್ಮ ಬಳಿಕಿಲ್ಲ.

ಸಾವು ಮಾತ್ರವೇ ನಮಗೆ ಬದುಕನ್ನು ಕಲಿಸಬಹುದು. **'Only love and death will change all things'** ಎನ್ನುತ್ತಾನೆ, ಖಲೀಲ್ ಗಿಬ್ರಾನ್. ಸಾವು ಮಾತ್ರವೇ ಬದುಕಿನ ಬಗ್ಗೆ ಪ್ರೀತಿಯನ್ನು ಹುಟ್ಟಿಸಬಲ್ಲದು; ಗೌರವವನ್ನು ಉಂಟುಮಾಡಬಲ್ಲದು. ಇದಕ್ಕಿರುವ ದಾರಿ ಏನು? ಕಗ್ಗದ ಪದ್ಯವೊಂದು ಇದನ್ನು ಮನೋಜ್ಞವಾಗಿ ನಿರೂಪಿಸುತ್ತದೆ:

ಹೊಸತನವೆ ಬಾಳು; ಹಳಸಿಕೆಯೆಲ್ಲ ಸಾವು ಬಿಡು ।
ರಸವು ನವನವತೆಯಿಂದನುದಿನವು ಹೊಮ್ಮಿ ॥